

ಕರ್ನಲ್ ಸರ್ಫರಾಜ್ ಹುಸೇನ್‌ರಿಗೆ ಅದೇಕೋ ಮಿಲ್ಟ್ರಿ ಅಕಾಡೆಮಿಯ ದಿನಗಳು ನೆನಪಾಗುತ್ತಿದ್ದವು. ಮಿಲ್ಟ್ರಿ ಬ್ಯಾರಕ್‌ನಿಂದ ಮನೆಗೆ ಹಿಂದಿರುವಾಗ ಕಾಲೇಜಿನಿಂದ ಬರುತ್ತಿರುವ ಯುವಕರು ಹೆಗಲ ಮೇಲೆ ಕೈಹಾಕಿಕೊಂಡು ಹರ್ಷದಿಂದ ಹೋಗುತ್ತಿರುವುದನ್ನು ಕಂಡಾಗ ಕರ್ನಲ್‌ರಿಗೆ ತಾನೂ ವೀರೇಂದ್ರನ ಹೆಗಲ ಮೇಲೆ ಕೈಹಾಕಿ ಹೊರಟಿರುವಂತೆ ಭಾಸವಾಗುತ್ತಿತ್ತು. ರಾತ್ರಿ ಊಟಕ್ಕಿಂತ ಮೊದಲು ಮಿಲ್ಟ್ರಿ ಕ್ವಾರ್ಟರ್ಸ್‌ನ ಪೋರ್ಟಿಕೋದಲ್ಲಿ ಕುಳಿತು ಒಂದೆರಡು ಪೆಗ್ ಕುಡಿಯುತ್ತಾರೆ, ಜೈನಬ್ ಬೇಗಮ್ ಹುರಿದ ಕಾಜು ಬದಾಮ್‌ಗಳನ್ನು ಪ್ಲೇಟ್‌ನಲ್ಲಿ ತಂದಿಡುತ್ತಾಳೆ. ಆ ಕ್ಷಣಗಳಲ್ಲಿ ಅವರ ಕಣ್ಮುಂದೆ ಅವರ ಯೌವ್ವನದ ಹೊಸ್ಟಿಲಲ್ಲಿನ ಆ ದಿನಗಳು ಸಜೀವವಾಗುತ್ತವೆ.

ಹೌದು, ಆಗಿನ್ನೂ ಇಂಡಿಯಾದ ಹಂಚಿಕೆಯಾಗಿರಲಿಲ್ಲ. ಹಿಂದೂಸ್ತಾನ ಪಾಕಿಸ್ತಾನಗಳು ಹುಟ್ಟಿಕೊಂಡಿರಲಿಲ್ಲ. 1947ರಲ್ಲಿ ಬ್ರಿಟಿಷರು ಹೊರಟು ಹೋದರು. ಈ ನೆಲದಲ್ಲಿ ರಕ್ತದ ಓಕುಳಿ ಶುರುವಾಯಿತು. ಮಿಲ್ಟ್ರಿಯ ಕೆಡರ್‌ಗಳಿಗೆ ಮತ್ತು ಸೈನಿಕರಿಗೆ ಕಾರ್ಯಾಲಯದಿಂದ ಪತ್ರಗಳು ಬಂದವು– 'ನೀವು ಎಲ್ಲಿರಲು ಬಯಸುತ್ತೀರಿ? ಇಂಡಿಯಾದಲ್ಲೋ ಪಾಕಿಸ್ತಾನದಲ್ಲೋ?' ಆ ದಿನಗಳಲ್ಲಿ ಸರ್ಫರಾಜ್ ಹುಸೇನ್ ಜಾಫರ್ ಬರೀ ಒಬ್ಬ ಸೆಕಂಡ್ ಲೆಫ್ಟಿನೆಂಟ್ ಆಗಿದ್ದ. ಈ ದಿನಗಳಲ್ಲಂತೂ ಜಂಟಲ್‌ಮೆನ್ ಕೆಡೆಟ್‌ಗಳಿಗೆ ನೇರವಾಗಿ ಲೆಫ್ಟಿನೆಂಟ್ ಹುದ್ದೆಗೆ ಬಡ್ತಿ ನೀಡಲಾಗುತ್ತದೆ; ಸೆಕೆಂಡ್ ಲೆಫ್ಟಿನೆಂಟ್ ಎಂಬುದೇ ಇಲ್ಲ. ಅದಿರಲಿ, ಆತ ಪಾಕಿಸ್ತಾನಕ್ಕೆ ತೆರಳುವ ಅವಕಾಶವನ್ನು ಆಯ್ಕೆ ಮಾಡಿದ. ಅವನ ತಂದೆಯವರು ಅದೆಷ್ಟೋ ಬಾರಿ 'ಅವಕಾಶ ಸಿಕ್ಕಿದೆ. ಹೋಗಿಬಿಡೋಣ. ಬೇಕಿದ್ದರೆ ಅಲ್ಲಿಯೇ ನಿನ್ನ ಧ್ವಜ ನೆಟ್ಟುಕೊ. ಇಲ್ಲಂತೂ ಜೀವಕ್ಕೆ ಅಪಾಯ ಇದ್ದದ್ದೆ. ಮುಂಬರುವ ದಿನಗಳಲ್ಲಿ ಏನೇನಾಗುತ್ತದೆ ಯಾರಿಗೆ ಗೊತ್ತು?' ಎಂದಿದ್ದರು. ಕೊನೆಗೂ ಅಷ್ಟೊಂದು ದೊಡ್ಡ ವಾಡೆಯನ್ನು ಮಾರಿ ತಮ್ಮ ಪಾಲಿನ ಹಣದೊಂದಿಗೆ ಅವನ ತಂದೆ ಹಾಗೂ ನಾಲ್ಕೂ ಚಿಕ್ಕಪ್ಪಂದಿರು ತಮ್ಮ ಸಂಸಾರಗಳೊಂದಿಗೆ ಪಾಕಿಸ್ತಾನಕ್ಕೆ ತೆರಳಿದ್ದರು.

ಆದರೆ, ಒಂದು ಮಾತಿನ ನೋವಂತೂ ಸದಾ ಉಳಿಯಿತು. ದೇಶ ತೊರೆದು ಬರುವಾಗ ವೀರೂನ ಭೇಟಿ ಆಗಲಿಲ್ಲ. ಭೇಟಿ ಆಗಲಿಲ್ಲ ಅಥವಾ ತನಗೆ ಅದು ಬೇಕಾಗಿರಲಿಲ್ಲ. ಒಂದೊಮ್ಮೆ ಭೇಟಿಯಾಗಿದ್ದರೆ ವೀರೇಂದ್ರ, 'ಗೆಳೆಯಾ, ಹಿಂದೂಸ್ತಾನ ಬಿಟ್ಟು ಅಲ್ಲಿಗೇಕೆ ಹೋಗುತ್ತಿ? ಇಲ್ಲಿ ಯಾವ ಕೊರತೆ ಇದೆ ನಿನಗೆ?' ಎಂದು ಕೇಳುತ್ತಿದ್ದ.

ಆಗ ಏನೆಂದು ಉತ್ತರಿಸಬೇಕಿತ್ತು? ಇಲ್ಲಿ ನಮ್ಮ ಪರಿವಾರದ ಜೀವಕ್ಕೆ ಹಾಗೂ ಆಸ್ತಿಗೆ ಅಪಾಯವಿದೆ ಎಂದು ಹೇಳಬೇಕೆ ಅಥವಾ ಮತ್ತಿನ್ನೇನಾದರೂ? ಸರ್ಫರಾಜ್‌ನ ಮೆದುಳಿನಲ್ಲಿದ್ದ –'ಇಲ್ಲಿದ್ದರೆ ಸರ್ವಿಸ್‌ನಲ್ಲಿ ಪ್ರಮೋಶನ್ ದೊರೆಯುವುದಿಲ್ಲ, ಇತರರಿಗಿಂತ ಹಿಂದುಳಿಯುವ ಭಯವಿದೆ' ಎಂಬ ಮಾತು ಹಾವಿನಂತೆ ಹೆಡೆ ಎತ್ತುತ್ತಿತ್ತು. ಬಹುಶಃ ಅವನ ಮನಸ್ಸಿನಲ್ಲಿ ತನ್ನ ಆಪ್ತಮಿತ್ರನಿಗಾಗಿ ಒಂದು ರೀತಿಯ ಸಿಟ್ಟು, ದ್ವೇಷದ ಭಾವನೆ ಬೆಳೆಯುತ್ತಿತ್ತು. ಆದರೆ, ಏಕೆ? ವೀರೇಂದ್ರಸಿಂಹ ಪಟಿಯಾಲಾ ಅಂಥದ್ದೇನು ಮಾಡಿದ್ದ? ಅಥವಾ ಇವನೂ ಒಬ್ಬ ಇಂಡಿಯನ್ ಆಗಿದ್ದಾನೆ, ಆದ್ದರಿಂದ!... ದೇವರೇ ಬಲ್ಲ...

ಸಮುದ್ರದ ಮೇಲಿನ ತೆರೆಗಳು ಮಾತ್ರ ಕಾಣುತ್ತವೆ... ಅದರ ಆಳದಲ್ಲಿ ಅದ್ಯಾವ ಸುನಾಮಿ ಏಳುತ್ತಿದೆ ಎಂಬುದನ್ನು ಯಾರು ಹೇಳಬಲ್ಲರು.

ವಿಭಜನೆಯಾಗಿ ಇಪ್ಪತ್ತು ವರ್ಷ ಕಳೆದಿದೆ. ಈ ಇಪ್ಪತ್ತು ವರ್ಷಗಳಲ್ಲಿ ವೀರೇಂದ್ರ ಒಮ್ಮೆಯೂ